ಅ) ಐ.ಎ ಎಸ್. ಅಧಿಕಾರಿಗಳ ಮೇಲೆ ಈ ವರ್ಷ ಎಷ್ಟು ದೂರುಗಳು ಬಂದಿವೆ. ಅವುಗಳಲ್ಲಿ ಎಷ್ಟು ವಿಚಾರಣೆ ಮುಗಿದಿದೆ ಎಷ್ಟು ಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿ (ಸಸ್ಪೆಂಡ್) ಇಡಲಾಗಿದೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) i) ೧೯೮೭ನೇ ವರ್ಷದಲ್ಲಿ ಸ್ವೀಕರಿಸಿದ ದೂರುಗಳ ಸಂಖ್ಯೆ —೧೬

ii) ವಿಲೇ ಮಾಡಿರುವ ಪ್ರಕರಣಗಳ ಸಂಖ್ಯೆ —೧೩

iii) ಅಮಾನತ್ತಿನಲ್ಲಿಟ್ಟಿರುವ ಅಧಿಕಾರಿಗಳ ಸಂಖ್ಯೆ —ಇಲ್ಲ

ಹಳ್ಳಿಹೊಳೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿಗಳ ನೇಮಕ

೨೨೬. ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಹೊಳೆ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಅನೇಕ ವರ್ಷಗಳಿಂದ ವೈದ್ಯಾಧಿಕಾರಿಗಳಿಲ್ಲದಿರುವುದು ಮತ್ತು ನೇಮಿಸಲ್ಪಟ್ಟವರು ಉದ್ಯೋಗಕ್ಕೆ ಹಾಜರಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಈಗಿನ ಬದಲಿ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಏನೂ ಉಪಯೋಗವಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ನೇಮಕಗೊಂಡು ಕೆಲಸಕ್ಕೆ ಹಾಜರಾಗದೆ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿದ ವೈದ್ಯಾಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ.

ಈ) ವೈದ್ಯಾಧಿಕಾರಿಗಳನ್ನು ಯಾವಾಗ ನೇಮಿಸಲಾಗುವುದು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಸಿಸಿಎ ನಿಯಮಗಳ ಪ್ರಕಾರ ಅಂತಹ ವೈದ್ಯರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ.

ಈ) ದಿನಾಂಕ ೧೮-೧೦-೮೭ರಂದು ವೈದ್ಯರ ನೇಮಕ ಮಾಡಲಾಗಿದೆ.

ಅಂಕಲಗಿ ಪೋಲೀಸ್ ಸ್ಟೇಷನ್ ಸ್ಥಾಪನೆ

೨೩೧. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಕಲಗಿ ಗ್ರಾಮಕ್ಕೆ ಪೋಲೀಸ್ ಠಾಣೆ ಮಂಜೂರಾಗಿದೆಯೇ :

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಈಗ ಅಂಕಲಗಿಯಲ್ಲಿ ಹೊರವಲಯ ಠಾಣೆ ಇದೆ. ಪೊಲೀಸ್ ಠಾಣೆ ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕೆ.ಜಿ. ಒಂದಕ್ಕೆ ೨ರೂ.ಗಳಂತೆ ಅಕ್ಕಿ ವಿತರಣೆ ಮಾಡಿದ ಖರ್ಚಿನ ವಿವರ

೭೦೯. ಶ್ರೀ ಎನ್. ಎಂ. ಆಡ್ಯಂತಾಯ(ಸುರತ್‌ಕಲ್).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ೩ವರ್ಷಗಳಲ್ಲಿ ರಾಜ್ಯ ಸರ್ಕಾರವು ೨-೦೦ ರೂ.ಗಳಿಗೆ ಕೆ.ಜಿ ಅಕ್ಕಿಯನ್ನು ಪೂರೈಸಲು ಖರ್ಚು ಮಾಡಿದ ಹಣ ಎಷ್ಟು ವಿವರ ಒದಗಿಸುವುದು.

ಆ) ಈ ಯೋಜನೆಯಿಂದ ಲಾಭ ಪಡೆದ ಜನರೆಷ್ಟು ;

ಇ) ಈ ಯೋಜನೆಗಾಗಿ ಖರ್ಚು ಮಾಡಿದ ಹಣದಲ್ಲಿ ಕೇಂದ್ರ ಸರ್ಕಾರವು ಸಬ್ಸಿಡಿ ಮತ್ತು ಇತರೆ ರೂಪದಲ್ಲಿ ನೀಡಿರುವ ಮೊತ್ತ ಎಷ್ಟು?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯಸಚಿವರು).

ಅ) ೩ ವರ್ಷಗಳಲ್ಲಿ ರಾಜ್ಯ ಸರ್ಕಾರವು ೨-೦೦ ರೂ.ಗಳಿಗೆ ಕೆ.ಜಿ. ಅಕ್ಕಿಯನ್ನು ಪೂರೈಸಲು ಮಾಡಿದ ಖರ್ಚಿನ ವಿವರ ಕೆಳಕಂಡಂತಿದೆ.

ವರ್ಷಗಳು		ಖರ್ಚು (ಕೋಟಿಗಳಲ್ಲಿ)
೧೯೮೫-೮೬		೧೫.೫೧
೧೯೮೬-೮೭		೩೦.೧೯
೧೯೮೭-೮೮ (ಡಿಸೆಂಬರ್ ೮೭ರವರೆಗೆ)		೧೪.೫೭
	ಒಟ್ಟು	೬೦.೨೭

ಆ) ೩೧.೧೩ ಲಕ್ಷ ಕುಟುಂಬಗಳು

ಇ) ಈ ಯೋಜನೆಗೆ ಭಾರತ ಸರ್ಕಾರವು ಯಾವ ರೀತಿಯಲ್ಲಿಯೂ ಸಬ್ಸಿಡಿಯನ್ನು ನೀಡುತ್ತಿಲ್ಲ.

ಬಂದೀಖಾನೆಗಳಲ್ಲಿರುವ ಖೈದಿಗಳ ಸಂಖ್ಯೆ

೭೧೮. ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಅಥಣಿ).— ಮಾನ್ಯ ಗೃಹಕಾಸು, ಬಂದೀಖಾನೆ ಮತ್ತು ಸಣ್ಣ ಉಳಿತಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಬೆಂಗಳೂರು-ಬಳ್ಳಾರಿ ಹಾಗೂ ಬೆಳಗಾಂ ನಗರದ ಬಂದೀಖಾನೆಗಳಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು?

ಆ) ಇವರಲ್ಲಿ ಜೀವಾವಧಿ-ಅಲ್ಪಾವಧಿ ಶಿಕ್ಷೆ ಅನುಭವಿಸುತ್ತಿರುವವರೆಷ್ಟು? ಅವರುಗಳಲ್ಲಿ ಮಹಿಳೆಯರೆಷ್ಟು?

ಇ) ನ್ಯಾಯಾಲಯದ ವಿಚಾರಣೆಗೊಳಗಾಗಿ ಸೆರೆಮನೆಯಲ್ಲಿರುವವರೆಷ್ಟು ಮಂದಿ ಹಾಗೂ ಇವರಲ್ಲಿ ೬ ತಿಂಗಳುಗಳಿಂದ ೧ ವರ್ಷ ವಿಚಾರಣೆ ಅವಧಿಯಲ್ಲಿ ಸೆರೆಮನೆ ವಾಸ ಅನುಭವಿಸುತ್ತಿರುವ ಖೈದಿಗಳ ಸಂಖ್ಯೆ ಎಷ್ಟು? ವಿಚಾರಣಾ ಕಾಲದಲ್ಲಿ ಸೆರೆಮನೆ ವಾಸದಲ್ಲಿರಿಸಲು ಕಾಲಾವಧಿ ಏನಾದರೂ ಇದೆಯೇ?